ಈ ಕೆಲಸ ಮಾಡ್ಡೋನಲ್ಲ ಅನ್ನೋದು ಎಲ್ರೂಗೂ ತಿಳಿದಿದ್ದೇ. ಯಾರೋ ಮಾಡಿದ ತಪ್ಪಿಗೆ ಇನ್ಯಾರೋ ಶಿಕ್ಷೆ ಅನುಭವಿಸೋದು ನ್ಯಾಯ ಅಲ್ವೇ ಅಲ್ಲ ಅನ್ನೋದೆ ಎಲ್ಲಾ ಕಾನೂನು ಕಟ್ಟಲೆಗಳಲ್ಲಿ ಹೇಳೋದು. ಇಷ್ಟಕ್ಕೂ ಪೆಂಚಾಲಯ್ಯನೇನೂ ಮಾರ್ಕ್ಸ್ ಕಾರ್ಡ್ ತಿದ್ದಿ ಅದರಿಂದ ಲಾಭನೇನೂ ಪಡ್ಕಂಡಿಲ್ಲ. ಹಂಗೆ ನೋಡಿದ್ರೆ ಪ್ರತಿ ಹಂತದಲ್ಲೂ ತಪ್ಪನ್ನು ನೋಡಿ ಸರಿಪಡಿಸದೆ ನಮಗ್ಯಾಕೆ ಅಂತ ಕೈ ಕಟ್ಟಿಕೊಂಡು ತಪ್ಪನ್ನು ಮುಂದಕ್ಕೆ ತಳ್ಳಿದವರೆಲ್ಲರೂ ತಪ್ಪಿತಸ್ಥರೆ ಆಗ್ತಾರೆ. ಆದರೆ, ಅದೆಲ್ಲ ಮುಖ್ಯವಾಗದೆ ತಪ್ಪು ತಿಳಿದೂ ಅದನ್ನು ಸರಿಪಡಿಸಿಕೊಳ್ಳದೆ ಇರೋದು ಪೆಂಚಾಲಯ್ಯನದೇ ದೊಡ್ಡ ತಪ್ಪು. ಒಂದು ವಿಷಯ ಹೇಳ್ತೀನಿ ಸಾಹೇಬ್ರೆ, ಐಎಎಸ್ ಆಫೀಸರ್ರುಗಳು ಅಧೀನ ನೌಕರರಿಂದ ವಿಧೇಯತೆಯನ್ನು, ಭಯವನ್ನು ತುಂಬಾ ಅಪೇಕ್ಷೆ ಪಡ್ತಾರೆ. ನೀವು ಕಮಿಷನರ್ ಸಾಹೇಬ್ರ ಜೊತೆ ಇರೋವಾಗ ಪೆಂಚಾಲಯ್ಯ ಬಂದು ಸಾಹೇಬ್ರ ಕಾಲ್ನ ಹಿಡ್ಕೊಳ್ಳಿ ಸಾರ್. ಆಗ ನೀವೂ ಒಂದು ಮಾತು ಸೇರಿಸಬಹುದು. ಅವರ ಮನಸ್ಸು ಕರಗಿ ಏನು ಹೇಳ್ತಾರೋ ನೋಡೋಣ.'' ಎಂದು ಹೇಳಿ ಅಡಿಷನಲ್ ಕಮಿಷನರ್ ಸಾಹೇಬ್ರುಗೆ ಕೈಮುಗಿದು, ''ಬರ್ತಿನಿ ಸಾರ್, ನಮಸ್ಕಾರ'' ಎಂದು ಹೇಳಿ ಹೊರಟ. ''ಇವೊತ್ತು ಸಂಜೆ ನಾಲ್ಕು ಗಂಟೆಗೆ ಕಮಿಷನರ್ ಚೇಂಬರಲ್ಲಿ ಇರ್ತೀನಿ, ಬಂದು ಸಾಹೇಬ್ರ ಕಾಲಿಡ್ಕೊಳ್ರಿ ಪೆಂಚಾಲಯ್ಯ, ಅದೂ ಒಂದು ಪ್ರಯೋಗ ಮಾಡಿ ನೋಡೋಣ.'' ಎಂದು ರಾಜೇಂದ್ರ ಪ್ರಸಾದ್ ಸಾಹೇಬರು ಪೆನ್ನನ್ನು ಕೆನ್ನೆಗೂ, ತುಟಿಗೂ ಬಡಿದುಕೊಳ್ಳತೊಡಗಿದರು. ಚೇಂಬರಿನಿಂದ ಹೊರ ಬಂದ ದೇವೇಗೌಡ ಮತ್ತು ಪೆಂಚಾಲಯ್ಯ ಇಬ್ಬರಿಗೂ ಒಂದಿಷ್ಟು ಸಮಾಧಾನವಾಗಿತ್ತು.

ನಾಲ್ಕು ಗಂಟೆಯವರೆಗೂ ಪೆಂಚಾಲಯ್ಯ ಚಡಪಡಿಸುತ್ತಲೇ ಕಾಲಕಳೆದಿದ್ದ. ಕರೆಕ್ಟಾಗಿ ನಾಲ್ಕು ಗಂಟೆಗೆ ಕಮಿಷನರ್ ಚೇಂಬರ್ ಹತ್ತಿರ ನಿಂತವನ ಕಾಲುಗಳು ಸಣ್ಣಗೆ ನಡುಗುತ್ತಿದ್ದವು. ಪಿ.ಎ. ಒಳಗೆ ಹೋಗಿ ಬಂದು ಪೆಂಚಾಲಯ್ಯನನ್ನು ಒಳಗೆ ಕಳುಹಿಸಿದ್ದ. ಕಮಿಷನರ್ ಸಾಹೇಬರ ಜೊತೆ ಅಡಿಷನಲ್ ಕಮಿಷನರ್ ರಾಜೇಂದ್ರ ಪ್ರಸಾದ್ ನಗುತ್ತಾ ಏನೋ ಮಾತನಾಡುತ್ತಾ ಕುಳಿತಿದ್ದರು. ಪೆಂಚಾಲಯ್ಯ ಹೋದ ಹೋದವನೇ ಟೇಬಲ್ ಪಕ್ಕ ಹೋಗಿ ಬಗ್ಗಿ ಕಮಿಷನರ್ ಕಾಲು ಹಿಡಿದು, ''ನೀವೇ ಕಾಪಾಡಬೇಕು ಸಾರ್.'' ಎಂದು ಗದ್ಗದಿತನಾಗಿದ್ದನಲ್ಲದೆ ಕಣ್ಣುಗಳಲ್ಲಿ ನೀರು ತರಿಸಿಕೊಂಡಿದ್ದ. ಕ್ಷಣ ವಿಚಲಿತರಾದ ಕಮಿಷನರ್, ''ಎದ್ದೇಳ್ರಿ, ಆ ಕಡೆ ನಿಂತ್ಕಳ್ರಿ.'' ಎಂದು ಗದರಿದ್ದರು. ಅದಕ್ಕೆ ರಾಜೇಂದ್ರ ಪ್ರಸಾದರೂ ಮೆಲ್ಲಗೆ ಧ್ವನಿಗೂಡಿಸಿದ್ದರು. ಪೆಂಚಾಲಯ್ಯ ಎದ್ದು ಹಿಂದೆ ಬಂದು ಕೈಕಟ್ಟಿಕೊಂಡು ನಿಂತುಕೊಂಡ. ''ಏನ್ರಿ ಪ್ರಸಾದ್, ಇವರ ಕಾಟ. ಫೆಬ್ರುವರಿ ಮೂವತ್ತನೇ ತಾರೀಖು ಡೇಟ್ ಆಫ್ ಬರ್ತ್ ಇಟ್ಟುಕೊಂಡು ಈ ಮನುಷ್ಯ ಎಂ.ಎ.ವರೆಗೂ ವಿದ್ಯಾಭ್ಯಾಸ ಮುಗಿಸಿ ಗೌರ್ಮೆಂಟ್ ಸರ್ವೀಸ್ ಕೂಡ ಮುಗಿಸಿದಾರೆ ಅಂದ್ರೆ, ವ್ಹಾಟ್ ಎ ಬ್ಲಡಿ ನಾನ್ ಸೆನ್ಸ್ ರೀ.'' ಎಂದು ರಾಜೇಂದ್ರ ಪ್ರಸಾದ್ ಕಡೆ ನೋಡಿ ತೀವ್ರವಾದ ಬೇಸರವನ್ನು ವ್ಯಕ್ತಪಡಿಸಿದ್ದರು. ರಾಜೇಂದ್ರ ಪ್ರಸಾದ್, ''ಆಗಿನ ಕಾಲದ ಹಳ್ಳಿ ಸ್ಕೂಲುಗಳ ಮೇಷ್ಟ್ರುಗಳು ಹಂಗೆ ಸಾರ್. ಯಾವುದೋ ಜ್ಞಾನದಲ್ಲಿ ಅಚಾತುರ್ಯ ಆಗೋಗಿದೆ. ಇವನಾದ್ರೂ ಎಚ್ಚೆತ್ತುಕೊಳ್ಳಬೇಕಿತ್ತು ಸ್ವಲ್ಪ. ಆದರೆ, ಈ ಪೆಂಚಾಲಯ್ಯ ಮೊದ್ದು ಸಾರ್. ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ತಂಗಳಿಟ್ಟು, ಎಮ್ಮೆ ಹಾಲು ಮಕ್ಕಳನ್ನು ಚುರುಕಾಗೋದಕ್ಕೆ ಬಿಡ್ತಿರ್ಲಿಲ್ಲ ಸಾರ್. ಈ ಪೆಂಚಾಲಯ್ಯ ಕೂಡ ಅದೇ ತಲೆಮಾರಿಗೆ ಸೇರಿದೋನು. ಪಾಪ, ತುಂಬಾ ಒಳ್ಳೇನು. ನಾನೂ ಸರ್ವಿಸ್ ರಿಜಿಸ್ಟರನ್ನು ಎರಡು ಮೂರು ಸಾರಿ ತಿರುವಿ ಹಾಕ್ದೆ. ಅದೊಂದು ಬಿಟ್ಟು ಇನ್ಯಾವ ರಿಮಾರ್ಕೂ ಇಲ್ಲ ಪಾಪ.'' ಎಂದು ಮಾತು ನಿಲ್ಲಿಸಿ ಕಮಿಷನರ್ ಪ್ರತಿಕ್ರಿಯೆಗೆ ಕಾದರು. ಕಮಿಷನರ್ ಹತ್ತು ಸೆಕೆಂಡ್ ಕಾಲ ಯೋಚಿಸಿ, ''ನಿಮ್ಮ ಡೇಟ್ ಆಫ್ ಬರ್ತ್ ಬರೆದ ಮೇಷ್ಟ್ರುನ ಕರೆದುಕೊಂಡು ಬನ್ರಿ. ಅವರತ್ರ ಒಂದು ಸ್ಟೇಟ್ಮೆಂಟ್ ತಗೊಂಡು ಫೈಲ್ ಕ್ಲಿಯರ್ ಮಾಡೋಣ.'' ಎಂದು ಪೆಂಚಾಲಯ್ಯನಿಗೆ ಹೇಳಿ, ರಾಜೇಂದ್ರ ಪ್ರಸಾದ್ ಕಡೆ ತಿರುಗಿ, ''ಏನೇಳ್ತೀರಿ ಪ್ರಸಾದ್.'' ಎಂದಿದ್ದರು.